ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12.10.2023.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದಃ

ಸಾಕ್ಷಿಗೆ ದಿಃ 25.11.2014 ರ ಒಂದು ದಾಖಲೆ ತೋರಿಸುತ್ತಿದ್ದು, ಅದರಲ್ಲಿಯ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ತಕರಾರಿಗೆ ಒಳಪಟ್ಟು **ನಿಡಿ-1** ಎಂದು, ಸಾಕ್ಷಿ ಛಾಯಾಚಿತ್ರವನ್ನು **ನಿಡಿ-1(ಎ)** ಎಂದು ಗುರುತಿಸಲಾಯಿತು, ಆದರೆ ಅದರಲ್ಲಿ ಸಹಿ ನನ್ನದು ಅಲ್ಲ ಎಂದು ನುಡಿಯುತ್ತಾರೆ. ನಜುಮುನ್ನಿಸಾ ಬೇಗಂ ನನಗೆ ತಾಯಿಯಾಗಬೇಕು. ನಾನು ನನ್ನ ತಾಯಿಯ ಸಹಿಯನ್ನು ಗುರುತಿಸುವುದಿಲ್ಲ, ಏಕೆಂದರೆ

ಅವಳು ಶಾಲೆ ಕಲಿತಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ದಿಃ 18.05.2007 ರ ದಾಖಲೆಯನ್ನು ತೋರಿಸುತ್ತಿದ್ದು, ಅದರಲ್ಲಿ ತನ್ನ ತಾಯಿ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ, ಅದನ್ನು ತಕರಾರಿಗೆ ಒಳಪಟ್ಟು **ನಿಡಿ-2** ಎಂದು, ತಾಯಿಯ ಛಾಯಾಚಿತ್ರವನ್ನು **ನಿಡಿ-2(ಎ)** ಎಂದು ಗುರುತಿಸಲಾಯಿತು.

ಮಹ್ಮದ್ ಹನಿಫ್ ತಂದೆ ಅಬ್ದುಲ್ ಕಹಿಯುಮ್ ಬಾರುದವಾಲೆ ಯಾರು ಎಂದು ನನಗೆ ಗೊತ್ತಿಲ್ಲ, ಅವರ ಬಗ್ಗೆ ನಾನು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಖಾಜಾ ಮೈನುದ್ದಿನ್ ತಂದೆ ಇಕ್ಬಾಲ್ ಅಹೆಮ್ಮದ್ ಶೇಖ್ ಯಾರು ಎಂದು ನನಗೆ ಗೊತ್ತಿಲ್ಲ, ಅವರ ಬಗ್ಗೆ ನಾನು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಮುಂಬೈ ವಕೀಲರಾದ ಎ.ಎನ್. ಪಾಂಡೆ ಮತ್ತು ಜಾವೇದ್ ಹುಸೇನ್ ವಕೀಲರು ಯಾರು ಏನು ಎಂದು ನನಗೆ ಗೊತ್ತಿಲ್ಲ, ಅವರ ಬಗ್ಗೆ ನಾನು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ನಿಡಿ-1 ರ ದಾಖಲೆಯನ್ನು ನಾನು ಮತ್ತು ನನ್ನ ಸಹೋದರಿಯಾದ 1 ನೇ ವಾದಿ ರವರು ಕೂಡಿಕೊಂಡು 1 ನೇ ಪ್ರತಿವಾದಿ ಮತ್ತು ಇನ್ನೊಬ್ಬ ಸಹೋದರನಾದ ಇಸಾಲಿ ರವರಿಗೆ ನಮ್ಮದು ಯಾವುದೇ ಹಕ್ಕು ವಗರೆ ದಾವಾ ಸ್ವತ್ತುಗಳಲ್ಲಿ ಇರುವುದಿಲ್ಲ ಎಂದು ರೂ.3 ಲಕ್ಷ ಹಣವನ್ನು 1 ನೇ ಪ್ರತಿವಾದಿಯಿಂದ ಪಡೆದುಕೊಂಡು ಸ್ವ-ಖುಷಿಯಿಂದ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಅದೇ ರೀತಿ ನಿಡಿ-1 ರ ದಾಖಲೆಯಲ್ಲಿ ದಾವಾ ಆಸ್ತಿಗಳ ಹಂಚಿಕೆ ಬಗ್ಗೆ ಮುಂದೆ ಏನಾದಾರೂ ದಾವೆ ಆದರೆ ನಾವು ಯಾವುದೇ ಹಕ್ಕು ಕೇಳುವುದಿಲ್ಲ ಎಂದು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-2 ರಂತೆ ನನ್ನ ತಾಯಿ ನಜುಮುನ್ನಿಸಾ ರವರು ಸಾಕ್ಷಿದಾರರ ಸಮಕ್ಷಮ ವಸಿಯತ್‌ನ್ನು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾಳೆ

ಎಂದರೆ ಸರಿಯಲ್ಲ. ನಿಡಿ-2 ರ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನನಗೆ ನಿಡಿ-2 ರ ಬಗ್ಗೆ ಗೊತ್ತಿದ್ದರೂ ಕೂಡಾ ಮುಚ್ಚಿಇಟ್ಟು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು 1 ನೇ ವಾದಿಗೆ ಈ ದಾವಾ ಆಸ್ತಿಯಲ್ಲಿ ಯಾವುದೇ ಹಿತಾಸಕ್ತಿ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು 1 ನೇ ವಾದಿ 1 ನೇ ಪ್ರತಿವಾದಿಯಿಂದ ರೂ.3 ಲಕ್ಷ ಗಳನ್ನು ತೆಗೆದುಕೊಂಡು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ಆಗಿದ್ದರ ಬಗ್ಗೆ ನಮಗೆ ಆವಾಗಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**